# ಬಹು ರುಚಿಯ ಬುತ್ತಿ



ಕಲೆ: ದಿನೇಶ್ ಹೊಳ್ಳ

ಕನ್ನಡ ಸಾಹಿತ್ಯವನ್ನು ವಿಭಿನ್ನ ನೆಲೆಗಳಲ್ಲಿ ಪ್ರಭಾವಿಸಿದ ವಿಶಿಷ್ಟ ವ್ಯಕ್ತಿತ್ವಗಳ ಸ್ಮರಣೆಯ ಬರಹಗಳು 'ಮಯೂರ'ದ ಈ ಸಂಚಿಕೆಯ ವಿಶೇಷ. ಆಧುನಿಕ ಕನ್ನಡ ಸಾಹಿತ್ಯ ಪ್ರಖರ ರಾಜಕೀಯ ಪ್ರಜ್ಞೆಯನ್ನೂ, ಸಮಾಜವಾದದ ಸ್ಪರ್ಶವನ್ನೂ ಪಡೆದುಕೊಳ್ಳುವಲ್ಲಿ ಶಾಂತವೇರಿ ಗೋಪಾಲಗೌಡರ ಕೊಡುಗೆ ದೊಡ್ಡದು. ನಾಡಿನ ರಾಜಕಾರಣಕ್ಕೆ ಸಾಂಸ್ಕೃತಿಕ ಪ್ರಭೆ ತಂದುಕೊಟ್ಟ ಕೀರ್ತಿಗೂ ಅವರು ಭಾಜನರು. 'ಕಾಮರೂಪಿ' ಹೆಸರಿನಲ್ಲಿ ಅನನ್ಯ ಕಥೆ–ಕಾದಂಬರಿಗಳನ್ನು ರಚಿಸಿದ ಎಂ.ಎಸ್. ಪ್ರಭಾಕರ, ಪತ್ರಕರ್ತರಾಗಿ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದವರು. ಪತ್ರಿಕೋದ್ಯಮದ ಘನತೆ ಹೆಚ್ಚಿಸಿದವರು. ಕನ್ನಡ ಜಗತ್ತಿನ ವೈವಿಧ್ಯವನ್ನು ಸಮೃದ್ಧಗೊಳಿಸಿದ ಶಾಂತವೇರಿ ಗೋಪಾಲಗೌಡ ಹಾಗೂ ಕಾಮರೂಪಿ ಅವರನ್ನು ನೆನಪಿಸಿಕೊಳ್ಳುವ ಎರಡು ಬರಹಗಳು ಈ ಕಾಲಕ್ಕೆ ಅಗತ್ಯವಾದ ಮೌಲ್ಯಪ್ರಜ್ಞೆಯನ್ನು ನೆನಪು ಮಾಡುವುದರ ಜೊತೆಗೆ, ಕಳೆದುಹೋದ ಕಾಲಘಟ್ಟಗಳ ದಾಖಲೆಗಳಂತೆಯೂ ಮುಖ್ಯವೆನ್ನಿಸುತ್ತವೆ. ಕಾಮರೂಪಿ ಅವರ ಬದುಕು–ಸಾಧನೆಯನ್ನು ಕಟ್ಟಿಕೊಡುವ ರಹಮತ್ ತರೀಕೆರೆ ಅವರ ವಿಸ್ತೃತ ಬರಹ, ಅನನ್ಯ ವ್ಯಕ್ತಿತ್ವದ ವಿಶಿಷ್ಟ ಸ್ಮೃತಿಚಿತ್ರವಾಗಿರುವುದರ ಜೊತೆಗೆ, ಬರವಣಿಗೆಯ ಶೈಲಿಯಿಂದಲೂ ವಿಶೇಷವಾದುದಾಗಿದೆ. ಜನ್ಮ ಶತಮಾನೋತ್ಸವದ ನೆಪದಲ್ಲಿ ಶಾಂತವೇರಿ ಗೋಪಾಲಗೌಡರ ಕುರಿತು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಹಂಚಿಕೊಂಡಿರುವ ಸ್ವಾದಿಷ್ಟಕರ 'ನೆನಪಿನ ಬುತ್ತಿ', ಗೌಡರ ಅಷ್ಟೇನೂ ಜನಪ್ರಿಯವಲ್ಲದ ಕೌಟುಂಬಿಕ ವ್ಯಕ್ತಿತ್ವವನ್ನು ಪರಿಚಯಿಸುವಂತಿದೆ. ಈ ಎರಡೂ ಸ್ಮೃತಿಬಿಂಬಗಳನ್ನು, ಅನ್ಯ ಕ್ಷೇತ್ರಗಳೊಂದಿಗಿನ ಸಖ್ಯದಲ್ಲಿ ಕನ್ನಡ ಸಾಹಿತ್ಯ ಸಾಧಿಸಿದ ಅರ್ಥಪೂರ್ಣ ಕೊಡು–ಕೊಳು ನಂಟಿನ ರೂಪದಲ್ಲೂ ಗಮನಿಸಬಹುದು.

ಬದುಕಿನ ಹಲವು ಮಗ್ಗುಲುಗಳನ್ನು ಕಾಣಿಸುವ, ಆ ಮೂಲಕ ನಮ್ಮ ಸಂವೇದನೆಗಳನ್ನು ಸೂಕ್ಷ್ಮಗೊಳಿಸುವ ಕಥೆ, ಕವಿತೆ, ಪ್ರಬಂಧ, ವಿಮರ್ಶಾ ಬರಹಗಳು ಹಾಗೂ ಕಲಾಕೃತಿಗಳು ಈ ಸಂಚಿಕೆಯಲ್ಲಿವೆ. ಸಮಕಾಲೀನ ಸಾಹಿತ್ಯ ಸಂದರ್ಭದ ಉತ್ತಮ ಫಸಲುಗಳಾದ ಈ ರಚನೆಗಳು ಸಹೃದಯಿ ಓದುಗರಿಗೆ ರುಚಿಸುವ ನಂಬಿಕೆ ನಮ್ಮದು.

**ಮಯೂರ ಬಳಗ**
editormy@mayura.co.in